2. ಹಾಗಿದ್ದಲ್ಲಿ, ಮಹಿಳಾ ಪಾಲಿಟೆಕ್ನಿಕ್ ಪ್ರಾರಂಭ ಮಾಡಲು ಸರ್ಕಾರವು ಯಾವ ಕ್ರಮ ಕೈಗೊಂಡಿದೆ?

ಶ್ರೀ ಹೆಚ್.ವಿಶ್ವನಾಥ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):

1. ಇಲ್ಲ.

2. ಉದ್ಭವಿಸುವುದಿಲ್ಲ.

ಕಣಗಾಲು ಗ್ರಾಮದಲ್ಲಿ ಕುಡಿಯುವ ನೀರಿನ ಯೋಜನೆ.

153(26)

ಶ್ರೀ ಬಸವರಾಜು ಹೆಚ್.ಸಿ.(ಪಿರಿಯಾಪಟ್ಟಣ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಿರಿಯಾಪಟ್ಟಣ ತಾಲ್ಲೂಕು ಕಣಗಾಲು ಗ್ರಾಮದಲ್ಲಿ ವಿಶ್ವಬ್ಯಾಂಕ್ ಯೋಜನೆಯಡಿಯಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದು ಕೊಳವೆ ಬಾವಿ ನೀರು ಕುಡಿಯಲು ಯೋಗ್ಯವಿಲ್ಲದೆ ಜನರ ಆರೋಗ್ಯ ಕೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಬದಲಿ ವ್ಯವಸ್ಥೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು):

ಅ) ಪಿರಿಯಾಪಟ್ಟಣ ತಾಲ್ಲೂಕು ಕಣಗಾಲು ಗ್ರಾಮದಲ್ಲಿ ವಿಶ್ವಬ್ಯಾಂಕ್ ಯೋಜನೆಯಡಿಯಲ್ಲಿ ಕುಡಿಯುವ ನೀರಿನ ಯೋಜನೆ ಅಳವಡಿಸಲಾಗಿದೆ. ಸದರಿ ಯೋಜನೆಯಡಿ ಕೊರೆಯಲಾದ ಕೊಳವೆ ಬಾವಿ ನೀರು ಕುಡಿಯಲು ಯೋಗ್ಯವಾಗಿರುತ್ತದೆ. ಆದಾಗ್ಯೂ ಸಹ ಕೊಳವೆ ಬಾವಿ ನೀರು ಕುಡಿಯಲು ಯೋಗ್ಯವಿಲ್ಲವೆಂದು ಗ್ರಾಮಸ್ಥರು ತಿಳಿಸಿರುತ್ತಾರೆ. ಆದರೆ ಇದರಿಂದಾಗಿ ಜನರ ಆರೋಗ್ಯ ಕೆಟ್ಟಿರುವುದು ಎಂಬುದರ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ) ಎರಡು ತಾಂತ್ರಿಕ ಸಂಸ್ಥೆಗಳಾದ ಎನ್.ಐ.ಇ. ಮತ್ತು ಜೆ.ಎಸ್.ಎಸ್. ಮೈಸೂರು ಸಂಸ್ಥೆಗಳಲ್ಲಿ ನಡೆಸಲಾದ ವಿವರವಾದ ವೈಜ್ಞಾನಿಕ ಪ್ರಯೋಗಗಳಿಂದ ವಿಶ್ವಬ್ಯಾಂಕ್ ಯೋಜನೆ ಅಡಿಯಲ್ಲಿ ಕಣಗಾಲು ಗ್ರಾಮದಲ್ಲಿ ಕೊರೆಯಿಸಿರುವ ಕೊಳವೆ ಬಾವಿಗಳ

ನೀರು ಕುಡಿಯಲು ಯೋಗ್ಯವಾಗಿದೆ ಎಂಬುದು ಧೃಡಪಟ್ಟಿರುತ್ತದೆ. ಹಾಲಿ ಸರಬರಾಜಾಗುತ್ತಿರುವ ನೀರು ಕುಡಿಯಲು ಯೋಗ್ಯವಾಗಿರುವುದರಿಂದ ಬದಲಿ ವ್ಯವಸ್ಥೆ ಮಾಡುವ ಅವಶ್ಯಕತೆ ಇರುವುದಿಲ್ಲ.

ಸೇಡಂ ತಾಲ್ಲೂಕಿನಲ್ಲಿ ಪ್ರಧಾನ ಮಂತ್ರಿಯವರ ಗ್ರಾಮೀಣ ಸಂಪರ್ಕ ಯೋಜನೆ.

154(27)

ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ(ಸೇಡಂ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನಲ್ಲಿ ಪ್ರಧಾನ ಮಂತ್ರಿ ಗ್ರಾಮೀಣ ಸಂಪರ್ಕ ಯೋಜನೆಯಡಿ ಮಂಜೂರಾಗಿರುವ ರಸ್ತೆಗಳು ಯಾವ್ಯಾವು?

2. ಈ ರಸ್ತೆಗಳ ಅಂದಾಜು ಪಟ್ಟಿ ಜಿಲ್ಲಾ ಪಂಚಾಯತಿಯವರು ಮಾಡಿರುವುದು ನಿಜವಲ್ಲವೇ? ಮಾಡಿದರೆ ಆಯಾ ರಸ್ತೆಗಳ ಕಿ.ಮೀ. ಎಷ್ಟು? ಅದಕ್ಕೆ ಮಾಡಿರುವ ವೆಚ್ಚವೆಷ್ಟು?

3. ಈ ಯೋಜನೆಯಡಿಯಲ್ಲಿ ಮಂಜೂರಾಗಿರುವ ರಸ್ತೆಗಳ ಬಗ್ಗೆ ಇಲ್ಲಿಯವರೆಗೆ ಜಿಲ್ಲಾ ಪಂಚಾಯತಿಯವರು ಟೆಂಡರ್ ಕರೆಯದಿರಲು ಕಾರಣಗಳೇನು?

4. ಈ ರಸ್ತೆಗಳ ಟೆಂಡರು ಕರೆದು ಕೆಲಸ ಪ್ರಾರಂಭ ಮಾಡುವುದು ಯಾವಾಗ?

Sri M.Y.GHORPADE (Minister for Rural Development & Panchayat Raj):

1. ಪ್ರಧಾನ ಮಂತ್ರಿ ಗ್ರಾಮೀಣ ಸಂಪರ್ಕ ಯೋಜನೆಯಡಿಯಲ್ಲಿ ಸೇಡಂ ತಾಲ್ಲೂಕಿಗೆ ಸಂಬಂಧಿಸಿದ ಈ ಕೆಳಕಂಡ ರಸ್ತೆಯನ್ನು ಮಂಜೂರಾತಿಗಾಗಿ ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದೆ.

ಅ. ಮೋತ್ತಕಪಲ್ಲಿಯಿಂದ ಮೇದಕ್ (ಹೈದರಾಬಾದ್-ಬಿಜಾಪುರ) ರಸ್ತೆ ಡಾಂಬರೀಕರಣ ಮಾಡುವುದು ರೂ.60.00 ಲಕ್ಷಗಳು.

2. ಅಂದಾಜು ಪಟ್ಟಿ ಮಾಡಿರುತ್ತಾರೆ. ಈ ಕೆಳಗಿನಂತಿದೆ.

ಅ. ಮೋತಕಪಲ್ಲಿಯಿಂದ ಮೇದಕ್(ಹೈದರಾಬಾದ್-ಬಿಜಾಪುರ) ರಸ್